ವಿಷಯ: ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಮಂಜೂರಾಗಿರುವ ಅನುದಾನ ಬಳಸಿಕೊಳ್ಳುವ ಕುರಿತು.

ಸಂ: ಗ್ರಾಅಪ:44:ಸುಗ್ರಾಯೋ:2017

4 ದಯಮಾಡಿ ಮೇಲಿನ ಪ್ಯಾರಾಗಳನ್ನು ಅವಗಾಹಿಸುವುದು. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮವನ್ನು ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಮಾನ್ಯ ವಿಧಾನ ಸಭಾ ಸದಸ್ಯರು ಆಯ್ಕೆ ಮಾಡಿದ್ದು, ಇದಕ್ಕೆ ರೂ.1.00 ಕೋಟಿಗಳ ಅನುದಾನದೊಂದಿಗೆ ಕೊಂಡಜ್ಜಿ ಗ್ರಾಮವನ್ನು ಅನುಮೋದಿಸಲಾಗಿದೆ.

5 ಸದರಿ ಗ್ರಾಮದಲ್ಲಿ ರೂ.1.00 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ಅವಕಾಶ ಕಲ್ಪಿಸಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಆದರೆ, ಈ ಎಲ್ಲಾ ಕಾಮಗಾರಿಗಳ ಬದಲಿಗೆ ಕೊಂಡಜ್ಜಿ ಸಮುಧಾಯ ಭವನವನ್ನು ನಿರ್ಮಿಸಲು ರೂ.1.00 ನಕೋಟಿಗಳನ್ನು ಬಳಸಿಕೊಳ್ಳಲು ಮಾನ್ಯ ವಿಧಾನ ಸಭಾ ಸದಸ್ಯರು ಛಾವುಟ – 1 ರಲ್ಲಿ ಮಾನ್ಯ ಸಚಿವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಕುರಿತಂತೆ ಮನವಿಯನ್ನು ಪರಿಶೀಲಿಸಿ ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ವಹಿಸಲು ಮಾನ್ಯ ಸಚಿವರು ಛಾವುಟ –2 ರಲ್ಲಿರುವಂತೆ ಸೂಚಿಸಿರುತ್ತಾರೆ.

6 ಪರಿಶೀಲಿಸಲಾಗಿ ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯ ಅನುದಾನದಲ್ಲಿ ಗ್ರಾಮದಲ್ಲಿ ಮಾರ್ಗಸೂಚಿಯಲ್ಲಿ ಕಲ್ಪಿಸಿರುವಂತೆ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಿ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಮಾಡಲು ಯೋಜನೆಯ ಆಶಯವಾಗಿರುತ್ತದೆ.

7 ಆದರೆ ರೂ.1.00 ಕೋಟಿಗಳ ಮೊತ್ತದಲ್ಲಿ ಸಮುದಾಯ ಭವನವನ್ನು ನಿರ್ಮಿಸಲು ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ. ಆದರೆ, ಸಮುದಾಯ ಭವನವನ್ನು ಹೊರತುಪಡಿಸಿ ಮಾರ್ಗಸೂಚಿಯಲ್ಲಿ ಅಳವಡಿಸಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಅನುಷ್ಠಾನಗೊಂಡಿರುವ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ಇವರಿಂದ ವರದಿ ಪಡೆದು ಮುಂದಿನ ಕ್ರಮ ಜರುಗಿಸಬಹುದಾಗಿದೆ.

8 ಈ ಅಂಶಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಅನುಮೋದನೆ ಪಡೆಯಬಹುದಾಗಿದೆ.

(ಡಾ. ಮೂವನಹಳ್ಳಿನಾಗರಾಜು)
ನಿರ್ದೇಶಕರು (ಸುಗ್ರಾಯೋ, ರಸ್ತೆ & ಸೇತುವೆ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

9 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

Pr.Secy./RDPR
No. 3198 Dt. 23/1/17

ಡಾ.ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಷಯ: ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಮಂಜೂರಾಗಿರುವ ಅನುದಾನ ಬಳಸಿಕೊಳ್ಳುವ ಕುರಿತು.

ಸಂ: ಗ್ರಾಅಪ:44:ಸುಗ್ರಾಯೋ:2017

(1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಾರ್ಯಾಲಯದ ಟಿಪ್ಪಣಿ ದಿನಾಂಕ:14.12.2017ರಲ್ಲಿ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ವಿಧಾನ ಪರಿಷತ್ ಸದಸ್ಯರು ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ಕೊಂಡಜ್ಜಿ ಗ್ರಾಮವನ್ನು ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಈಗಾಗಲೇ ಆಯ್ಕೆ ಮಾಡಿದ್ದು, ಈ ಗ್ರಾಮದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದರಿಂದ, ಮಂಜೂರಾಗಿರುವ ರೂ.100.00 ಲಕ್ಷಗಳ ಅನುದಾನವನ್ನು ಸಮುದಾಯ ಬವನ ನಿರ್ಮಾಣ ಮಾಡಲು ಉಪಯೋಗಿಸಿಕೊಳ್ಳಲು ಅನುಮತಿ ನೀಡಲು ಕೋರಿದ್ದು, ಸದರಿಯವರ ಮನವಿಯನ್ನು ಪರಿಶೀಲಿಸಿ ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ವಹಿಸಲು ಸೂಚಿಸಿರುತ್ತಾರೆ.( ಬಾವುಟ-1) ಅವಗಾಹಿಸುವುದು.

(2) ಅದರಂತೆ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಮಂಜೂರಾಗಿರುವ ರೂ.100.00 ಅನುದಾನ ಸಮುದಾಯ ಭವನ ನಿರ್ಮಾಣ ಮಾಡಲು ಅನುಮತಿ ಕೋರಿರುವ ಬಗ್ಗೆ ಮಾನ್ಯರ ಆದೇಶ ಕೋರಿ ಕಡತ ಮಂಡಿಸಿದೆ. 22/12

(3) ನಿರ್ದೇಶಕರು (ಸುಗ್ರಾಯೋ) 22/12